ಸಿರಿಗನ್ನಡಂ ಗೆಲ್ಗೆ                                                                 ಸಿರಿಗನ್ನಡಂ ಬಾಳ್ಗೆ

## ದಿನಾಂಕ: 09–07–2023 ರಂದು ನಡೆದ ಸೌಂದರ್ಯನಗರ ಕ್ಷೇಮಾಭಿವೃದ್ಧಿ ಸಂಘದ "ವಿಶೇಷ ಸರ್ವ ಸದಸ್ಯರ ಸಭೆ"ಯ ನಡವಳಿಕೆಗಳು

ಈ ವಿಶೇಷ ಸರ್ವ ಸದಸ್ಯರ ಸಭೆಯು ದಿನಾಂಕ : 18–06–2023 ರ ನೋಟಿಸಿನಂತೆ ಬೆಳಗ್ಗೆ 10–00 ಗಂಟೆಗೆ ಸೇರಿದ್ದು ಆದರೆ ಅಗತ್ಯ ಸದಸ್ಯರ ಹಾಜರಾತಿ/ಕೋರಂ ಇಲ್ಲದ ಕಾರಣ ಸಂಘದ ಬೈಲಾದ ನಿಯಮ 8.3 ರಂತೆ ಸಭೆಯನ್ನು ಕೆಲಕಾಲ ಮುಂದೂಡಿ ನಂತರ ಬೆಳಿಗ್ಗೆ 11–00 ಗಂಟೆಗೆ ಅಗತ್ಯ ಸದಸ್ಯರ ಹಾಜರಾತಿಯೊಂದಿಗೆ/ಕೋರಂನೊಂದಿಗೆ ವಿಶೇಷ ಸರ್ವ ಸದಸ್ಯರ ಸಭೆಯನ್ನು ಈ ಕೆಳಕಂಡ ಕಾರ್ಯಕ್ರಮಗಳೊಂದಿಗೆ ಪ್ರಾರಂಭಿಸಲಾಯಿತು.

ನಿರೂಪಣೆ : ಜಂಟಿ ಕಾರ್ಯದರ್ಶಿಗಳಾದ ಶ್ರೀ ಚಂದ್ರಶೇಖರ್.ಎಲ್. ರವರು ಈ ಸಭೆಯ ನಿರೂಪಣೆ ಮಾಡಿದರು.

1. **ಓಂಕಾರ :** ವಿಶೇಷ ಸರ್ವ ಸದಸ್ಯರ ಸೆಭೆಯುನ್ನು ಓಂಕಾರದ ಮೂಲಕ ಪ್ರಾರಂಭಿಸಲಾಯಿತು.

2. **ದೀಪ ಬೆಳಗುವಿಕೆ :** ಸಭೆಯನು ಜ್ಯೋತಿ ಬೆಳಗುವ ಮೂಲಕ ಚಾಲನೆ ನೀಡಲಾಯಿತು.

3. **ಪ್ರಾರ್ಥನೆ :** ಕುಮಾರಿ. ಸೃಷ್ಠಿ, ಪ್ರಿಯ ಮತ್ತು ಅನುಮಿತ ರವರುಗಳಿಂದ ದೇವರ ಪ್ರಾರ್ಥನೆ ಮಾಡಲಾಯಿತು.

4. **ಸ್ವಾಗತ ಭಾಷಣ :** ಪ್ರಧಾನ ಕಾರ್ಯದರ್ಶಿಗಳಾದ ಡಾ. ಸೋಮಶೇಖರ್ ರವರು ವಿಶೇಷ ಸರ್ವ ಸದಸ್ಯರ ಸಭೆಗೆ ಆಗಮಿಸಿದ ಸಂಘದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿದರು.

5. **ಶ್ರದ್ಧಾಂಜಲಿ:** 2022–2023 ನೇ ಸಾಲಿನಲ್ಲಿ ನಮ್ಮನ್ನು ಅಗಲಿದ ನಮ್ಮ ಸಂಘದ ಹಿಂದಿನ ಪ್ರಧಾನ ಕಾರ್ಯದರ್ಶಿಯಾಗಿ ನಂತರ ಅಧ್ಯಕ್ಷರಾಗಿ ಹಲವು ವರ್ಷಗಳ ಕಾಲ ಸಂಘದ ಶ್ರೇಯೋಭಿವೃಧಿಗಾಗಿ ಶ್ರಮಿಸಿ ಇತ್ತೀಚೆಗೆ ಸ್ವರ್ಗಸ್ಥರಾದ ದಿವಂಗತ: ಉದಯಕುಮಾರ್ ರವರ ಫೋಟೋಗೆ ಪುಷ್ಪನಮನ ಸಲ್ಲಿಸುವುದರೊಂದಿಗೆ ಬಡಾವಣೆಯ ಎಲ್ಲಾ ಸ್ವರ್ಗಸ್ಥ ಸದಸ್ಯರುಗಳಿಗೆ, ರಾಜ್ಯ ಮತ್ತು ದೇಶದ ಸ್ವರ್ಗಸ್ಥ ಗಣ್ಯರುಗಳಿಗೆ ಒಂದು ನಿಮಿಷದ ಮೌನಾಚರಣೆಯ ಮೂಲಕ ಶ್ರದ್ಧಾಂಜಲಿ ಅರ್ಪಿಸಲಾಯಿತು.

6. **ಸಂಘದ ಬೈಲಾ ತಿದ್ದುಪಡಿ ಕರಡಿನ ಅನುಮೋದನೆಗಾಗಿ ಸಭೆಯ ಮುಂದೆ ಮಂಡನೆ :** ಸಂಘದ ಪ್ರಧಾನಕಾರ್ಯದರ್ಶಿಗಳಾದ ಡಾ. ಬಿ.ಸೋಮಶೇಖರ್ ರವರು ಇಂದಿನ ವಿಶೇಷ ಸರ್ವ ಸದಸ್ಯರ ಸಭೆಯ ಅಜೆಂಡವನ್ನು ಸಭೆಗೆ ತಿಳಿಸಿದರು. ಸಂಘದ ಬೈಲಾದ ತಿದ್ದುಪಡಿ ಕರಡಿನ ಪ್ರತಿಗಳನ್ನು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೆ ಕೊಡಲಾಯಿತು. ಸಂಘದ ಬೈಲಾಗೆ ತಿದ್ದುಪಡಿ ಮಾಡಲುದ್ದೇಶಿಸಿರುವ ಕಲಾಂಗಳು ಮತ್ತು ನಿಯಮಗಳನ್ನು ಸಭೆಗೆ ವಿವರವಾಗಿ ಓದಿ ಹೇಳಿದರು ಮತ್ತು ತಿದ್ದುಪಡಿ ಕರಡಿನ ಮೇಲೆ ಚರ್ಚೆ ಮತ್ತು ಅನುಮೋದನೆಗಾಗಿ ಸಭೆಗೆ ಮಂಡಿಸಿದರು :–

7. **<u>ಬೈಲಾ ತಿದ್ದುಪಡಿ ಅನುಮೋದನೆಗಾಗಿ ನೆಡೆದ ತೆರೆದ ಮನೆಯ ಚರ್ಚೆಯ ವಿವರ :</u>**

- <u>ಬಿಂದು ಮಾಧವನ್</u> :(12ನೇ ಅಡ್ಡರಸ್ತೆ) ಬೈಲಾ ತಿದ್ದುಪಡಿ ಪ್ರತಿಯ ಪುಟ–6, ಪಾಯಿಂಟ್ ನಂ 4.3 (4) ರಲ್ಲಿ ನಮೂದು ಮಾಡಿರುವ : ಯಾವುದೇ ವ್ಯಕ್ತಿಯ ಸದಸ್ಯತ್ವದ ಅರ್ಜಿಯನ್ನು ತಿರಸ್ಕರಿಸಿದಾಗ, ಸಂಘದ ಆಡಳಿತ ಮಂಡಳಿಯು ಸದಸ್ಯತ್ವಕ್ಕಾಗಿ ಅರ್ಜಿಕೊಟ್ಟಿದ್ದ ವ್ಯಕ್ತಿಗಳಿಗೆ ತಮ್ಮ ಅರ್ಜಿ ತಿರಸ್ಕಾರಗೊಂಡಿದೆಯೆಂದು ತಿಳಿಸುವಾಗ ಯಾವ ಕಾರಣಕ್ಕಾಗಿ ಅವರ ಅರ್ಜಿ ತಿರಸ್ಕಾರಗೊಂಡಿದೆ ಎಂಬ ಕಾರಣ ಕೊಡುವ ಅಗತ್ಯವಿಲ್ಲ ಎಂಬ ಅಂಶ ಸರಿಯಲ್ಲ. ಯಾವುದೇ ವ್ಯಕ್ತಿಯ ಸದಸ್ಯತ್ವದ ಅರ್ಜಿ ತಿರಸ್ಕಾರಗೊಂಡಾಗ ಸಂಘದ ಆಡಳಿತ ಮಂಡಳಿಯು ಅರ್ಜಿ ತಿರಸ್ಕಾರಗೊಂಡ ಕಾರಣ ತಿಳಿಸಬೇಕಾಗುತ್ತದೆ. ಈ ಸಂಬಂದ ತಿದ್ದುಪಡಿ ಕರಡಿನಲ್ಲಿ ಅಗತ್ಯ ಮಾರ್ಪಾಡು ಮಾಡಲು ಸೂಚಿಸಿದರು.
- ಕಾರ್ಯದರ್ಶಿಗಳು : ನಿಮ್ಮ ಸಲಹೆಯನ್ನು ಪರಿಗಣಿಸಿ ಬೈಲಾದ ತಿದ್ದುಪಡಿ ಕರಡಿನಲ್ಲಿ ಅಗತ್ಯ ಬದಲಾವಣೆ ಮಾಡಲಾಗುವುದು ಎಂದರು ಮತ್ತು ಸಭೆಯು ಈ ಬದಲಾವಣೆಗೆ ಅನುಮೋದನೆ ನೀಡಿತು.

- <u>ಹನುಮೇಗೌಡರು</u> : (14ನೇ ಅಡ್ಡರಸ್ತೆ, 1–ಬಿ ಮುಖ್ಯರಸ್ತೆ)
  (ಅ) ಸಂಘದ ವಿಳಾಸ 1–ಸಿ ಮುಖ್ಯರಸ್ತೆಯೆಂದು ತಪ್ಪಿದೆ,
  (ಆ) ಪುಟ–2 1.2 ರಲ್ಲಿನ : ಗುಂಡಪ್ಪ ಬಡಾವಣೆ ಮತ್ತು ಬಾಲಾಜಿ ಬಡಾವಣೆಗಳು ಎಂದು ಏಕೆ ನಮೂದು ಮಾಡಿದ್ದೀರ ?
- ಕಾರ್ಯದರ್ಶಿಗಳು : ಹೌದು ಸಂಘದ ಬೈಲಾನಲ್ಲಿ ಸೌಂದರ್ಯ ಬಡಾವಣೆಯ ಎಕ್ಸಟೆನ್ಷನ್ ಗಳೆಂದು ನಮೂದು ಮಾಡಿರುವುದರಿಂದ ಅವುಗಳ ಸರಿಯಾದ ವ್ಯಾಖ್ಯಾಯನಕ್ಕಾಗಿ ಅಗತ್ಯವಿರುವುದರಿಂದ ಆ ಬಡಾವಣೆಗಳ (ಹಿಂದಿನ) ಹೆಸರಗಳನ್ನು ನಮೂದು ಮಾಡಲಾಗಿದೆ ಅಷ್ಟೇ.

- <u>ಸುಬ್ಬಣ್ಣ</u> (10ನೆ ಅಡ್ಡರಸ್ತೆ) : ಪುಟ– 6, ಕಾಲಂ 4.4 ರ 1. (A) – ಹೊಸ ಸದಸ್ಯರ ನೋಂದಣಿಗಾಗಿ ರೂ. 2,000/– ಗಳ್ನು ನಿಗದಿ ಮಾಡಿರುವುದು ಹೆಚ್ಚಾಯಿತು ಕಡಿಮೆ ಮಾಡಿದರೆ ಒಳ್ಳೆಯದು ಎಂಬುದು ನನ್ನ ಸಲಹೆ.
- ಕಾರ್ಯದರ್ಶಿಗಳು :ಈ ಸದಸ್ಯತ್ವ ನೋಂದಣಿ ಶುಲ್ಕ ರೂ.2000/– ಗಳು ಈ ತಿದ್ದುಪಡಿ ಬೈಲಾದ ಅನುಮೋದನೆಗೊಂಡ ನಂತರ ಸಂಘದ ಸದಸ್ಯತ್ವಕ್ಕಾಗಿ ಅರ್ಜಿಸಲ್ಲಿಸುವ ಹೊಸ ಸದಸ್ಯರಿಗೆ ಮಾತ್ರ ಅನ್ವಯವಾಗುವುದು, ಹಳೆಯ ಸದಸ್ಯರಿಗಲ್ಲ.

- <u>ಹನುಮೇಗೌಡರು</u> : ಪುಟ 14 ರ ಪಾಯಿಂಟ್ 9.14 – ಸಂಘದ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು ಯಾವುದೇ ರಾಜಕೀಯ ಪಕ್ಷಗಳ ಯಾವುದೇ ಹುದ್ದೆಗಳನ್ನು ಹೊಂದಿರಬಾರುದು ಎಂದು ಹಾಕಲಾಗಿದೆ ಏಕೆ ?
- ಕಾರ್ಯದರ್ಶಿಗಳು : ನಮ್ಮ ಸಂಘವು ರಾಜಕೀಯೇತರ ಸಂಘವಾಗಿರುವುದರಿಂದ ಮತ್ತು ಬಡಾವಣೆಯ ಅಭಿವೃದ್ಧಿ ಕೆಲಸಗಳನ್ನು ರಚನಾತ್ಮಕವಾಗಿ ಯಾವುದೇ ಪಕ್ಷಬೇದ ಇಲ್ಲದೆ ಮತ್ತು ಯಾವುದೇ ಅಡೆತಡೆಗಳಿಲ್ಲದೆ ಮಾಡಬೇಕಾದರೆ ಈ ನಿರ್ಬಂಧ ಅಗತ್ಯವಾಗಿದೆ ಆದ್ದರಿಂದ ಸೇರಿಸಲಾಗಿದೆ ಮತ್ತು ನಮ್ಮ ಹಿಂದಿನ ಬೈಲಾದಲ್ಲೂ ಈ ನಿರ್ಬಂಧವಿತ್ತು ಆದನ್ನು ವಿಸ್ತೃತವಾಗಿ ವ್ಯಾಕ್ಯಾನಿಸಲಾಗಿದೆ ಅಷ್ಟೆ.

ಸಂಖ್ಯೆ.........
ದಿನಾಂಕ.......

- <u>ಅರುಣ್ ಮರಾಠೆ</u> : ನಮ್ಮ ಸದಸ್ಯರು ಅಕ್ಕಪಕ್ಕದ ಬಡಾವಣೆಯಲ್ಲೂ ನಿವೇಶನ ಹೊಂದಿದ್ದು, ಅಲ್ಲಿಯ ಸಂಘದ ಪದಾಧಿಕಾರಿಗಳಾಗಿದ್ದರೆ, ಅಂತಹ ಸದಸ್ಯರು ನಮ್ಮ ಸಂಘದ ಪದಾಧಿಕಾರಿಗಳಾಗಲು ಬಯಸಿ ನಾಮಿನೇಷನ್ ಹಾಕಿದರೆ ಹೇಗೆ ನಿರ್ವಹಿಸುವುದು ಎಂಬ ಬಗೆ ಚರ್ಚೆ ಮಾಡಿ ಒಂದು ನಿರ್ಣಯಕ್ಕೆ ಬರುವುದು ಒಳ್ಳೆಯದು.

- ಸಭೆಯಲ್ಲಿ ಈ ವಿಷಯದ ಸಾಧಕ-ಬಾಧಕಗಳ ಬಗ್ಗೆ ಸುದೀರ್ಘ ಚರ್ಚೆಯ ನಂತರ ಡ್ಯುವಲ್ (ಎರಡು ಸಂಘಗಳಲ್ಲಿ) ಸದಸ್ಯತ್ವದ ಹೊಂದಿರುವ ಸದಸ್ಯರ ಬಗ್ಗೆ ಈ ಕೆಳಗಿನ ನಿರ್ಣಯವನ್ನು ಮಂಡಿಸಿ ಅಂಗೀಕರಿಸಲಾಯಿತು:

  (1) ನಮ್ಮ ಸಂಘದ ಸದಸ್ಯರುಗಳು ಅಕ್ಕಪಕ್ಕದ ಬಡಾವಣೆಯಲ್ಲಿಯೂ ನಿವೇಶನ-ಮನೆ ಹೊಂದಿರುವ ಸಾಧ್ಯತೆಗಳಿರುವುದರಿಂದ, ಅಂತಹ ಸದಸ್ಯರು ಎರಡು ಸಂಘಗಳಲ್ಲಿ ಸದಸ್ಯತ್ವ ಹೊಂದಲು ಯಾವುದೇ ನಿರ್ಬಂಧವಿರುವುದಿಲ್ಲ.

  (2) ಆದರೆ, ಈರೀತಿ ದ್ವಿ-ಸದಸ್ಯತ್ವ ಹೊಂದಿರುವ ನಮ್ಮ ಸದಸ್ಯರು ಅಕ್ಕಪಕ್ಕದ ಬಡಾವಣೆಯ ಸಂಘಗಳಲ್ಲಿ ಯವುದೇ ಪದಾಧಿಕಾರಿ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಯಾವುದೇ ಹುದ್ದೆಯಲ್ಲಿದ್ದರೆ, ಅಂತವರು ನಮ್ಮ ಸಂಘದ ಪದಾಧಿಕಾರಿಗಳಾಗಲು ಅಥವಾ ಕಾರ್ಯಕಾರಿ ಸಮಿತಿಯ ಸದಸ್ಯರಾಗಲು ಅನರ್ಹರಾಗಿರುತ್ತಾರೆ. ನಮ್ಮ ಸಂಘದ ಪದಾಧಿಕಾರಿಗಳ ಹುದ್ದೆಗೆ ಅಥವಾ ಕಾರ್ಯಕಾರಿ ಸಮಿತಿಯ ಸದಸ್ಯತ್ವದ ಹುದ್ದೆಗೆ ನಾಮಿನೇಷನ್ ಸಲ್ಲಿಸುವಾಗ ತಮ್ಮ ನಾಮಿನೇಶನ್ ಅರ್ಜಿಯೊಂದಿಗೆ ತಾವು ಅಕ್ಕಪಕ್ಕದ ಬಡಾವಣೆಯ ಸಂಘಗಳಲ್ಲಿ ಯವುದೇ ಪದಾಧಿಕಾರಿ ಅಥವಾ ಕಾರ್ಯಕಾರಿ ಸಮಿತಿಯ ಸದಸ್ಯತ್ವದ ಹುದ್ದೆ ಹೊಂದಿಲ್ಲವೆಂದು ಮತ್ತು ತಾವು ಯಾವುದೇ ರಾಜಕೀಯ ಪಕ್ಷದ ಯಾವುದೇ ಹುದ್ದೆಯಲ್ಲಿ ಇಲ್ಲವೆಂದು ಧೃಢೀಕರಣ ಪತ್ರ ನೀಡಬೇಕಾಗುತ್ತದೆ. ಒಂದೊಂಮ್ಮೆ ಈ ಬಗ್ಗೆ ಸುಳ್ಳು ಮಾಹಿತಿ ನೀಡಿ ನಮ್ಮ ಸಂಘದ ಪದಾಧಿಕಾರಿಗಳಾಗಿದ್ದರೆ ಅಥವಾ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದರೆ ಅಂತವರನ್ನು ಹುದ್ದೆಯಿಂದ ವಜಾಗೊಳಿಸಬಹುದಾಗಿರುತ್ತದೆ.

- <u>ನರಸಿಂಹನ್</u> : ಪುಟ -8, ಪಾಯಿಂಟ್– 9, ಸದಸ್ಯತ್ವದ ಐ.ಡಿ. ಕಾರ್ಡ್ ಬಗ್ಗೆ ಇದೆ ಯಾವಾಗ ಕೊಡುತ್ತೀರ.
- ಕಾರ್ಯದರ್ಶಿಗಳು : ಮುಂದಿನ ದಿನಗಳಲ್ಲಿ ನೀಡಲಾಗುವುದು.

- <u>ಹರ್ಷ</u> : (9ನೇ ಕ್ರಾಸ್) ಪುಟ–4, ಕ್ಲಾಸ್–1, ಪಾಯಿಂಟ್–5, ಸಂಘದ ಸದಸ್ಯತ್ವ ಕೊಡುವಾಗ ಅರ್ಜಿದಾರರು ಯಾವುದೇ ಘೋರ ಅಪರಾಧ ಪ್ರಕರಣಗಳಲ್ಲಿ ಅಪರಾಧಿಗಳಾಗಿದ್ದರೆ ಅವರು ಸಂಘದ ಸದಸ್ಯತ್ವ ಪಡೆಯಲು ಅರ್ಹರಲ್ಲ ಎಂದಿದೆ, ಹೇಗೆ ಪರಿಶೀಲಿಸುತ್ತೀರಿ ?

- <u>ಗೋವಿಂದ ಭಟ್</u> : ಹರ್ಷರವರ ಪ್ರಶ್ನೆಗೆ ಪೂರಕವಾಗಿ : ಯವುದೇ ವ್ಯಕ್ತಿಯು ಸಂಘದ ಸದಸ್ಯತ್ವಕ್ಕಾಗಿ ಅರ್ಜಿ ಹಾಕಿದರೆ, ಅಂತಹ ಅರ್ಜಿಗೆ ನಮ್ಮ ಸಂಘದಲ್ಲಿ ಈಗಾಗಲೆ ಸದಸ್ಯತ್ವ ಹೊಂದಿರುವ ಒಬ್ಬ ಖಾಯಂ ಸದಸ್ಯನು ಹೊಸ ಸದಸ್ಯತ್ವಕ್ಕೆ ಅರ್ಜಿ ಸಲ್ಲಿಸುವ ವ್ಯಕ್ತಿಯನ್ನು ಪರಿಚಯಿಸಲು ಪರಿಚಯಸ್ಥ ಸಹಿಯನ್ನು ಪಡೆಯುವುದು ಸೂಕ್ತ ಎಂಬ ಸಲಹೆ ನೀಡಿದರು.

- ಕಾರ್ಯದರ್ಶಿಗಳು : ಈ ಬಗ್ಗೆ ಪರಿಶೀಲಿಸಿ ಸದಸ್ಯತ್ವದ ಅರ್ಜಿಯಲ್ಲಿ ಅಗತ್ಯ ಮಾರ್ಪಾಡು ಮಾಡಲಾಗುವುದು.

- ಸುಬ್ಬಣ್ಣ (10ನೇ ಅಡ್ಡರಸ್ತೆ) : ಸಂಘದ ಪದಾಧಿಕಾರಿಗಳ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರ ಅಧಿಕಾರವಧಿಯನ್ನು 2 ವರ್ಷದಿಂದ 4 ವರ್ಷಕ್ಕೆ ಹೆಚ್ಚಿಸುವುದು ಸೂಕ್ತ ಎಂಬ ಸಲಹೆ ನೀಡಿದರು ಮತ್ತು ಬೈಲಾದಲ್ಲಿ ಈ ಬಗ್ಗೆ ಅಗತ್ಯ ತಿದ್ದುಪಡಿ ತರುವುದು ಅಗತ್ಯವೆಂದು ಸಬೆಗೆ ವಿನಂತಿಸಿದರು.

- ವಸಂತ್‌ಕುಮಾರ್ (9ನೇ ಅಡ್ಡರಸ್ತೆ) ಪ್ರತಿ 2 ವರ್ಷಕ್ಕೆ ಬರುವ ಪದಾಧಿಕಾರಿಗಳ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರ ಚುನಾವಣೆಗೆ ಅಧಿಕ ವೆಚ್ಚಗಾಗುತ್ತದೆ ಈ ಅನಗತ್ಯ ವೆಚ್ಚಗಳನ್ನು ತಪ್ಪಿಸಲು ಇವರ ಅಧಿಕಾರ ಅವದಿಯನ್ನು 2 ವರ್ಷ ದಿಂದ 4–5 ವರ್ಷಕ್ಕೆ ನಿಗದಿ ಮಾಡಿದರೆ ಸೂಕ್ತ ಮತ್ತು ಈ ಸಭೆಯಲ್ಲೇ ನಮ್ಮ ಬೈಲಾಗೆ ತಿದ್ದುಪಡಿ ಮಾಡುವುದು ಸೂಕ್ತ, ಎರಡು ವರ್ಷಕೊಂಮ್ಮೆ ಚುನಾವಣೆಗೆ ಮಾಡುವ ವೆಚ್ಚವನ್ನು ಬಡಾವಣೆಯ ಅಭಿವೃದ್ಧಿ ಕೆಲಸಗಳಿಗೆ ಉಪಯೋಗಿಸ ಬಹುದು.

- ಶ್ರೀಧರ್ ನಕ್ಷತ್ರಿ : ಕೋಆಪರೇಟಿವ್ ಕಾನೂನಿನ ಪ್ರಕಾರ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರ ಅಧಿಕಾರಾವದಿ 5 ವರ್ಷಕ್ಕೆ ಇದ್ದರೆ ಒಳ್ಳೆಯದು. ನಮ್ಮ ಬೈಲಾನಲ್ಲೂ ಈ ಬಗ್ಗೆ ತಿದ್ದುಪಡಿ ಮಾಡಿ.

- ಗೋವಿಂದ ಭಟ್ : ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೆ ಮಾತ್ರ ಚುನಾವಣೆ ಮಾಡಿ ಉಳಿದವರಿಗೆ ಚುನಾವಣೆ ಬೇಡ ಎಂದು ಸಲಹೆ ನೀಡಿದರು.

- ಶಂಕರಪ್ಪ : ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರ ಅಧಿಕಾರವದಿಯು 3–4 ವಷಗಳಿದ್ದರೆ ಒಳ್ಳೆಯದು, ಇದರಿಂದ ಚುನಾವಣೆಗಾಗಿ ಮಾಡುವ ಅನಗತ್ಯ ವೆಚ್ಚವನ್ನು ತಡೆಯಬಹುದು ಮತ್ತು ಈ ಸಬೆಯಲ್ಲಿ ಬೈಲಾದ ತಿದ್ದುಪಡಿಗೆ ನಮ್ಮ ಸಮ್ಮತಿ ಇದೆ ಎಂದರು.

ಸಂಘದ ಪದಾಧಿಕಾರಿಗಳ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರುಗಳ ಅಧಿಕಾರವದಿಯ ಬಗ್ಗೆ ಈ ವಿಶೇಷ ಸರ್ವ ಸದಸ್ಯರ ಸಭೆಯು ಸುಧೀರ್ಘವಾಗಿ ಚರ್ಚಿಸಿ ನಂತರ ಸಂಘದ ಪದಾಧಿಕಾರಿಗಳ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರುಗಳ ಪ್ರಸ್ತುತ ಇರುವ 2 ವರ್ಷದ ಅಧಿಕಾರವದಿಯನ್ನು ಹೆಚ್ಚಿಸ ಬೇಕೊ– ಬೇಡವೊ ಎಂಬ ಅಂಶವನ್ನು ಮತ್ತು ಅಧಿಕಾರವದಿ ಬಗ್ಗೆ ಸಂಘದ ಬೈಲಾದ ನಿಯಮಗಳ ತಿದ್ದುಪಡಿ ಅಗತ್ಯತೆಯನ್ನು ಸಂಘದ ಪ್ರಧಾನ ಕಾರ್ಯದರ್ಶಿಗಳು ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಿದರು:

ಸದಸ್ಯರೆಲ್ಲರೂ ಒಮ್ಮತದಿಂದ ಸಂಘದ ಪದಾಧಿಕಾರಿಗಳ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರುಗಳ ಅಧಿಕಾರವದಿಯನ್ನು ಹೆಚ್ಚಿಸಬೇಕೆಂದು ಮತ್ತು ಈ ಸಂಬಂದ ಈ ಸಭೆಯಲ್ಲಿಯೇ ಸಂಘದ ಬೈಲಾಗೆ ಅಗತ್ಯ ತಿದ್ದುಪಡಿ ಮಾಡಬೇಕೆಂದು ಸರ್ವಾನುಮತದಿಂದ ಅನುಮೋದನೆ ನೀಡಿದರು.

ನಂತರ ಪ್ರಧಾನ ಕಾರ್ಯದರ್ಶಿಗಳು ಸದಸ್ಯರ ಆಶಯದಂತೆ ಸಂಘದ ಪದಾಧಿಕಾರಿಗಳ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರುಗಳ ಅಧಿಕಾರವದಿಯನ್ನು 2 ವರ್ಷದಿಂದ 4 ವರ್ಷಗಳಿಗೆ ಹೆಚ್ಚಿಸುವ ಸಂಘದ ಬೈಲಾನ ನಿಯಮಗಳ ತಿದ್ದುಪಡಿಯ ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದರು :

ಸದಸ್ಯರುಗಳು ಸಂಘದ ಪದಾಧಿಕಾರಿಗಳ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರುಗಳ ಅಧಿಕಾರವದಿಯನ್ನು 4 ವರ್ಷಕ್ಕೆ ಹೆಚ್ಚಿಸಲು ತಮ್ಮ ಕೈ ಎತ್ತುವ ಮೂಲಕ ಸರ್ವಾನುಮತದಿಂದ ಅನುಮೋದಿಸಿದರು. ಮತ್ತು ಈ ದಿನದಿಂದಲೆ ಸಂಘದ ಪದಾಧಿಕಾರಿಗಳ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರುಗಳ ಅಧಿಕಾರವದಿಯು 4 ವರ್ಷಕ್ಕೆ ಅನುಮೋದನೆಗೊಂಡು ಜಾರಿಗೆ ಬಂದಿರುತ್ತದೆ.

ಈ ವಿಶೇಷ ಸರ್ವ ಸದಸ್ಯರ ಸಭೆಯು ಈ ದಿನ ಮಂಡಿಸಿದ ಸಂಘದ ಬೈಲಾನ ತಿದ್ದುಪಡಿ ಕರಡುನ್ನು ಈ ಮೇಲೆ ಚರ್ಚಿಸಿದ ಮತ್ತು ಸೂಚಿಸಿದ ಎಲ್ಲಾ ಬದಲಾವಣೆಯೊಂದಿಗೆ ಜಾರಿಗೆ ತರಲು ಸರ್ವಾನುಮತದಿಂದ ಅನುಮೋದಿಸಿತು ಮತ್ತು ಸಂಘದ ಈ ಅನುಮೋದಿತ ತಿದ್ದುಪಡಿ ಬೈಲಾವು ಈ ದಿನದಿಂದಲೇ ಅಂದರೆ ದಿನಾಂಕ: 09/07/2023 ರ ರಾತ್ರಿಯಿಂದಲೇ ಜಾರಿಗೆ ಬರುವಂತೆ ಅನುಮೋದಿಸಿದೆ.

8. **ವಂದನಾರ್ಪಣೆ** :- ಉಪಾಧ್ಯಕ್ಷರಾದ ಶ್ರೀ. ವೆಂಕಟೇಶ್ ಪ್ರಸಾದ್ ಭಟ್‌ರವರಿಂದ ವಂದನಾರ್ಪಣೆಯೊಂದಿಗೆ ಈ ವಿಶೇಷ ಸರ್ವ ಸದಸ್ಯರ ಸಭೆಯು ಮುಕ್ತಾಯಗೊಂಡಿರುತ್ತದೆ.

– ಲಘು ಉಪಹಾರ : ಸದಸ್ಯರೆಲ್ಲರಿಗೂ ಲಘು ಉಪಹಾರದ ವ್ಯವಸ್ಥೆ ಮಾಡಲಾಯಿತು.

ಅಧ್ಯಕ್ಷರು

ಪ್ರಧಾನ ಕಾರ್ಯದರ್ಶಿ